KABI030003222022

# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ, ಬಳ್ಳಾರಿ .

ಉಪಸ್ಥಿತರು
ಶ್ರೀ ಈರಪ್ಪ ಧವಳೇಶ್ವರ್ ಬಿ.ಎ. ಎಲ್.ಎಲ್.ಬಿ,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಬಳ್ಳಾರಿ .

**ಅಸಲು ದಾವಾ ಸಂಖ್ಯೆ: 80/2022**

**ದಿನಾಂಕ 29 ನೇ ಏಪ್ರಿಲ್ 2025**

ವಾದಿ/ಯರುಃ ವಿ.ರಾಮಾಂಜಿನೇಯಲು ತಂದೆ ದಿಃ ವಿ.ನಾಗಪ್ಪ, ವಯಸ್ಸುಃ50 ವರ್ಷ, ವಾಸಃ ಎಂ.ಜಿ.ಹಿಂಭಾಗ, ವಾರ್ಡ ನಂಃ17, ಹನುಮಾನ್ ನಗರ, ಬಳ್ಳಾರಿ.

(ಪ್ರತಿನಿಧಿಸುವವರುಃ ಶ್ರೀ ಎಂ.ಡಿ.ಇಸ್ಮಾಯಿಲ್ ನ್ಯಾಯವಾದಿಗಳು)

-ವಿರುದ್ಧ-

ಪ್ರತಿವಾದಿ/ಯರುಃ ಶ್ರೀ.ಎಸ್.ಲಕ್ಷ್ಮೀನಾರಾಯಣ ತಂದೆ ಎಸ್.ಪುಲ್ಲಯ್ಯ ವಯಸುಃ 52 ವರ್ಷ, ವಾಸಃ ಓರ್ವಾಯಿ ಕ್ರಾಸ್, ಎಮ್ಮಿಗನೂರು ಗ್ರಾಮ ಕುರುಗೋಡು ತಾಲ್ಲೂಕು, ಬಳ್ಳಾರಿ ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ ಬಿ.ವಿ.ಎಸ್., ನ್ಯಾಯವಾದಿಗಳು)

| | | | | |
|---|---|---|---|---|
| 1 | ದಾವಾ ದಾಖಲಿಸಿದ ದಿನಾಂಕ | 04.02.2022 | | |
| 2 | ದಾವಾ ಸ್ವರೂಪ | ಹಣದ ವಸೂಲಾತಿ ದಾವೆ | | |
| 3 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 15.04.2024 | | |
| 4 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 29.04.2025 | | |
| 5 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | **03** | **02** | **27** |

## -ತೀರ್ಪು-

ವಾದಿಯು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ರೂ.3,06,000/- ನ್ನು ವಾರ್ಷಿಕ ಶೇ.24% ರಂತೆ ಬಡ್ಡಿ ಸಹಿತ ಪಾವತಿಸುವಂತೆ ಡಿಕ್ರಿ ಮಾಡಬೇಕಾಗಿ ಕೋರಿ ದಾಖಲಿಸಿರುತ್ತಾರೆ.

**2.** ವಾದ ಪತ್ರದ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇರುತ್ತದೆ:-

ವಾದಿ ಮತ್ತು ಪ್ರತಿವಾದಿಯು ಒಬ್ಬರಿಗೊಬ್ಬರು ಪರಿಚಯಸ್ಥರಾಗಿದ್ದು, ಸದರಿ ಪ್ರತಿವಾದಿಯು ದಿನಾಂಕ 05.02.2019 ರಂದು ವಾದಿಯಿಂದ ರೂ.1,75,000-00 ಹಣವನ್ನು ಸಾಲವಾಗಿ ಪಡೆದು, ಸದರಿ ಸಾಲವನ್ನು ವಾರ್ಷಿಕ ಶೇ ರೂ.**24%** ಬಡ್ಡಿಯೊಂದಿಗೆ ವಾದಿಯು ಕೇಳಿದಾಗ ಮರು ಪಾವತಿಸಲು ಒಪ್ಪಿಕೊಂಡು ಅದಕ್ಕೆ ಭದ್ರತೆಗಾಗಿ ಪ್ರತಿವಾದಿಯು ಅದೇ ದಿನ ಒಂದು ಪ್ರಾಮಿಸರಿ ನೋಟನ್ನು ಸಾಕ್ಷಿದಾರರ ಸಮಕ್ಷಮ ರೂ.200/- ಇ-ಸ್ಟ್ಯಾಂಪ್ ಪೇಪರ್ ಮೇಲೆ ವಾದಿಯ ಪರವಾಗಿ ಜಾರಿ ಮಾಡಿಕೊಟ್ಟಿರುತ್ತಾರೆ. ಸದರಿ ವಾದಿಯು ಹಲವಾರು ಬಾರಿ ಪ್ರತಿವಾದಿಯನ್ನು ಹಣವನ್ನು ಮರು ಪಾವತಿಸುವಂತೆ ಕೇಳಿದ್ದರೂ ಸಹ ಮುಂದೂಡುತ್ತಾ ಬಂದಿರುತ್ತಾರೆ. ತದನಂತರದಲ್ಲಿ ವಾದಿಯು ದಿನಾಂಕ: 28.01.2022 ರಂದು ಪ್ರತಿವಾದಿಗೆ ಹಣವನ್ನು ಮರು ಪಾವತಿಸುವಂತೆ ಕೋರಿ ನೊಟೀಸ್ಸನ್ನು ಸಹ ನೀಡಿದ್ದಾಗ್ಯೂ ಸಹ ಪ್ರತಿವಾದಿಯು ಯಾವುದೇ ಹಣವನ್ನು ವಾದಿಗೆ ಪಾವತಿಸಿರುವುದಿಲ್ಲ. ಹಾಗಾಗಿ ವಾದಿಗೆ ಅನ್ಯ ಮಾರ್ಗವಿಲ್ಲದೆ ಈ ಪ್ರಸ್ತುತ ದಾವೆಯನ್ನು ಪ್ರತಿವಾದಿಗೆ ವಿರುದ್ಧ ಹಣದ ವಸೂಲಾತಿಗಾಗಿ ಸಲ್ಲಿಸಿರುತ್ತಾರೆ.

**3.** ವಾದಿಯು ದಾವೆಯನ್ನು ಸಲ್ಲಿಸಿದ ನಂತರ ಪ್ರತಿವಾದಿಗೆ ನ್ಯಾಯಾಲಯದ ಮೂಲಕ ನೋಟೀಸನ್ನು ಜಾರಿಗೊಳಿಸಿದ್ದು, ಪ್ರತಿವಾದಿಯು ತಮ್ಮ ವಕೀಲರ ಮೂಲಕ ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ ಸದರಿ ಪ್ರತಿವಾದ ಪತ್ರದಲ್ಲಿನ ಸಂಕ್ಷಿಪ್ತ ವಿವರಣೆ ಈ ಕೆಳಕಂಡಂತೆ ಇರುತ್ತದೆ

ಪ್ರತಿವಾದಿಯು ವಾದಿಯು ವಾದಪತ್ರದಲ್ಲಿ ಹೇಳಿರುವ ಅಂಶಗಳನ್ನು ನಿರ್ಧಿಷ್ಟವಾಗಿ ಅಲ್ಲಗಳೆಯುತ್ತಾ ಸದರಿ ಪ್ರತಿವಾದಿಯು ವಾದಿಯಿಂದ ಯಾವುದೇ ಹಣವನ್ನು ಸಾಲವಾಗಿ ಪಡೆದಿರುವುದಿಲ್ಲ ಮತ್ತು ಪ್ರತಿವಾದಿಯು ಯಾವುದೇ ಪ್ರಾಮಿಸರಿ ನೋಟನ್ನು ವಾದಿಯ ಪರವಾಗಿ ಜಾರಿಮಾಡಿ ಕೊಡದೇ ಇದ್ದರೂ ಕೂಡ ವಾದಿಯು ಪ್ರಾಮಿಸರಿ ನೋಟನ್ನು ಈ ಪ್ರಕರಣಕ್ಕಾಗಿ ಸೃಷ್ಠಿಸಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯು ತನ್ನ ರಾಜಕೀಯ ಪ್ರಭಾವದಿಂದ ತನ್ನನ್ನು ಕುರುಗೋಡು ಪೋಲೀಸ್ ಠಾಣೆಗೆ ಕರೆದು ಬಲವಂತವಾಗಿ ಇ.ಸ್ಟ್ಯಾಂಟ್ ಪೇಪರ್ ಮೇಲೆ ತನ್ನ ಸಹಿಯನ್ನು ಪಡೆದು ಪ್ರಾಮಿಸರಿ ನೋಟನ್ನು ಈ ಪ್ರಕರಣಕ್ಕಾಗಿ ಸೃಷ್ಠಿಸಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯು ಸಲ್ಲಿಸಿರುವ ದಾವೆಯು ಕಾಲ ಪರಿಮಿತಿ ಅಧಿನಿಯಮದ ಅಡಿಯಲ್ಲಿ ಊರ್ಜಿತವಾಗುವುದಿಲ್ಲ. ಹಾಗಾಗಿ ಈ ಮೇಲಿನ ಕಾರಣಗಳಿಗಾಗಿ ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚಿನೊಂದಿಗೆ ವಜಾಗೊಳಿಸಬೇಕಾಗಿ ಪ್ರಾರ್ಥಿಸಿಕೊಂಡಿರುತ್ತಾರೆ.

**4.** ಮೇಲ್ಕಾಣಿಸಿದ ಉಭಯ ಪಕ್ಷಗಾರರ ವಾದ-ಪ್ರತಿವಾದ ಪತ್ರಗಳಲ್ಲಿನ ಸಂಗತಿಗಳನ್ನು ಆಧರಿಸಿ ಈ ಕೆಳಗಿನಂತೆ ವಿವಾದಾಂಶಗಳನ್ನು ರೂಪಿಸಿರುತ್ತದೆ.

## ವಿವಾದಾಂಶಗಳು

1. Whether the plaintiff proves that, the defendant has borrowed a sum of Rs. 1,75,000/- on 05.02.2019 by executing Demand promissory note in favour of the plaintiff?
2. Whether the plaintiff proves that defendant failed to repay the amount along with the interest as agreed by the defendant?
3. Whether the plaintiff is entitled for the recovery of money?

**4.** Whether the plaintiff is entitled for the future interest as claimed in the plaint?

**5.** What order or decree **?**

5. ಈ ಮೇಲ್ಕಂಡ ವಿವಾದಾಂಶಗಳನ್ನು ರುಜುವಾತು ಪಡಿಸಲು ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ1 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ ಹಾಗೂ ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಜಿ.ವಿ.ನಾಗರಾಜ ಎಂಬುವವರನ್ನು ಪಿ.ಡಬ್ಲ್ಯೂ 2 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ವಾದಿಯು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿ.ಪಿ.1 ರಿಂದ 3 ರಂತೆ ದಾಖಲಾತಿಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ ಪ್ರತಿವಾದಿಯು ತನ್ನನ್ನು ತಾನು ಡಿ.ಡಬ್ಲ್ಯೂ1 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ ಹಾಗೂ ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಯು.ಮಲ್ಲಿಕಾರ್ಜುನ ಎಂಬುವವರನ್ನು ಡಿ.ಡಬ್ಲ್ಯೂ 2 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಪ್ರತಿವಾದಿಯು ತನ್ನ ಪರವಾಗಿ ಯಾವುದೇ ದಾಖಲಾತಿಗಳನ್ನು ನಿಶಾನಿಸಿಕೊಂಡಿರುವುದಿಲ್ಲ.

**6.** ಉಭಯ ಪಕ್ಷಗಾರರ ಪರ ವಕೀಲರ ವಾದ ವಿವಾದಗಳನ್ನು ಆಲಿಸಲಾಯಿತು.

**7.** ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆ:

ವಿವಾದಾಂಶ 1:- ಸಕಾರಾತ್ಮಕವಾಗಿ

ವಿವಾದಾಂಶ 2:- ಸಕಾರಾತ್ಮಕವಾಗಿ

ವಿವಾದಾಂಶ 3:- ಭಾಗಶಃ ಸಕಾರಾತ್ಮಕವಾಗಿ

ವಿವಾದಾಂಶ 4:- ಭಾಗಶಃ ಸಕಾರಾತ್ಮಕವಾಗಿ

ವಿವಾದಾಂಶ 5:- ಅಂತಿಮ ಆದೇಶದಂತೆ

## ಕಾ ರ ಣ ಗ ಳು

**8.** ವಿವಾದಾಂಶ **1 ರಿಂದ 4:-** ಈ ನಾಲ್ಕು ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದಲೂ ಮತ್ತು ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದಲೂ ಈ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ. ಈ ವಿವಾದಾಂಶಗಳನ್ನು ರುಜುವಾತುಪಡಿಸುವ ಹೊಣೆಗಾರಿಕೆಯು ವಾದಿಯ ಮೇಲೆಯೇ ಇರುತ್ತದೆ.

**9**. ಈ ವಿವಾದಾಂಶಗಳ ಕುರಿತು ವಾದಿಯು ತನ್ನ ವಾದಪತ್ರದಲ್ಲಿ ಈ ಕೆಳಕಂಡಂತೆ ನಮೂದಿಸಿರುತ್ತಾರೆಃ-

ವಾದಿ ಮತ್ತು ಪ್ರತಿವಾದಿಯು ಒಬ್ಬರಿಗೊಬ್ಬರು ಪರಿಚಯಸ್ಥರಾಗಿದ್ದು, ಸದರಿ ಪ್ರತಿವಾದಿಯು ದಿನಾಂಕ 05.02.2019 ರಂದು ವಾದಿಯಿಂದ ರೂ.1,75,000-00 ಹಣವನ್ನು ಸಾಲವಾಗಿ ಪಡೆದು, ಸದರಿ ಸಾಲವನ್ನು ವಾರ್ಷಿಕ ಶೇ ರೂ.24% ಬಡ್ಡಿಯೊಂದಿಗೆ ವಾದಿಯು ಕೇಳಿದಾಗ ಮರು ಪಾವತಿಸಲು ಒಪ್ಪಿಕೊಂಡು ಅದಕ್ಕೆ ಭದ್ರತೆಗಾಗಿ ಪ್ರತಿವಾದಿಯು ಅದೇ ದಿನ ಒಂದು ಪ್ರಾಮಿಸರಿ ನೋಟನ್ನು ಸಾಕ್ಷಿದಾರರ ಸಮಕ್ಷಮ ರೂ.200/- ಇ-ಸ್ಟ್ಯಾಂಪ್ ಪೇಪರ್ ಮೇಲೆ ವಾದಿಯ ಪರವಾಗಿ ಜಾರಿ ಮಾಡಿಕೊಟ್ಟಿರುತ್ತಾರೆ. ಸದರಿ ವಾದಿಯು ಹಲವಾರು ಬಾರಿ ಪ್ರತಿವಾದಿಯನ್ನು ಹಣವನ್ನು ಮರು ಪಾವತಿಸುವಂತೆ ಕೇಳಿದ್ದರೂ ಸಹ ಮುಂದೂಡುತ್ತಾ ಬಂದಿರುತ್ತಾರೆ. ತದನಂತರದಲ್ಲಿ ವಾದಿಯು ದಿನಾಂಕಃ 28.01.2022 ರಂದು ಪ್ರತಿವಾದಿಗೆ ಹಣವನ್ನು ಮರು ಪಾವತಿಸುವಂತೆ ಕೋರಿ ನೊಟೀಸ್ಸನ್ನು ಸಹ ನೀಡಿದ್ದಾಗ್ಯೂ ಸಹ ಪ್ರತಿವಾದಿಯು ಯಾವುದೇ ಹಣವನ್ನು ವಾದಿಗೆ ಪಾವತಿಸಿರುವುದಿಲ್ಲ. ಹಾಗಾಗಿ ವಾದಿಗೆ ಅನ್ಯ ಮಾರ್ಗವಿಲ್ಲದೆ ಈ ಪ್ರಸ್ತುತ ದಾವೆಯನ್ನು ಪ್ರತಿವಾದಿಗೆ ವಿರುದ್ಧ ಹಣದ ವಸೂಲಾತಿಗಾಗಿ ಸಲ್ಲಿಸಿರುತ್ತಾರೆ.

**10.** ಈ ವಿವಾದಾಂಶಗಳ ಕುರಿತು ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಈ ಕೆಳಕಂಡಂತೆ ನಮೂದಿಸಿರುತ್ತಾರೆಃ-

ಪ್ರತಿವಾದಿಯು ವಾದಿಯ ವಾದಪತ್ರದಲ್ಲಿ ಹೇಳಿರುವ ಅಂಶಗಳನ್ನು ನಿರ್ಧಿಷ್ಟವಾಗಿ ಅಲ್ಲಗಳೆಯುತ್ತಾ ವಾದಿಯು ಪ್ರತಿವಾದಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಮತ್ತು ಪ್ರಾಮಿಸರಿ ನೋಟನ್ನು ವಾದಿಯು ಪರವಾಗಿ ಜಾರಿ ಮಾಡಿ ಕೊಡದೇ ಇದ್ದರೂ ಸಹ ಪ್ರಾಮಿಸರಿ ನೋಟನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತಾರೆ. ವಾದಿಯು ತನ್ನ ರಾಜಕೀಯ ಪ್ರಭಾವದಿಂದ ತನ್ನನ್ನು ಕುರುಗೋಡು ಪೋಲೀಸ್ ಠಾಣೆಗೆ ಕರೆದು ಬಲವಂತವಾಗಿ ಇ.ಸ್ಟ್ಯಾಂಪ್ ಪೇಪರ್ ಮೇಲೆ ತನ್ನ ಸಹಿಯನ್ನು ಪಡೆದು ಪ್ರಾಮಿಸರಿ ನೋಟನ್ನು ಈ ಪ್ರಕರಣಕ್ಕಾಗಿ ಸೃಷ್ಠಿಸಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯು ಸಲ್ಲಿಸಿರುವ ದಾವೆಯು ಕಾಲ ಪರಿಮಿತಿ ಅಧಿನಿಯಮದ ಅಡಿಯಲ್ಲಿ ಊರ್ಜಿತವಾಗುವುದಿಲ್ಲ. ಹಾಗಾಗಿ ಈ ಮೇಲಿನ ಕಾರಣಗಳಿಗಾಗಿ ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚಿನೊಂದಿಗೆ ವಜಾಗೊಳಿಸಬೇಕಾಗಿ ಪ್ರಾರ್ಥಿಸಿಕೊಂಡಿರುತ್ತಾರೆ.

**11.** ಈ ಕುರಿತು ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ಪಿ.ಡಬ್ಲ್ಯೂ.1 ರವರು ತನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ವಾದಪತ್ರದಲ್ಲಿನ ಅಂಶಗಳನ್ನೇ ಪುನರುಚ್ಚರಿಸಿರುತ್ತಾರೆ. ವಾದಿಯು ತನ್ನ ಸಾಕ್ಷ್ಯಕ್ಕೆ ಪೂರಕವಾಗಿ ಜಿ.ವಿ.ನಾಗರಾಜ ಎಂಬುವವರನ್ನು ಪಿ.ಡಬ್ಲ್ಯೂ-2 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿ ಪಿ.ಡಬ್ಲ್ಯೂ.2 ರವರು ತಮ್ಮ ಸಾಕ್ಷ್ಯದಲ್ಲಿ ಪ್ರತಿವಾದಿಯು ವಾದಿಯಿಂದ ದಿನಾಂಕ **05.02.2019** ರಂದು ರೂ.**1,75,000/-** ಹಣವನ್ನು ತನ್ನ ಕುಟುಂಬದ ತುರ್ತು ಅಗತ್ಯತೆಗಾಗಿ ಪಡೆದು, ಸದರಿ ಹಣದ ಭದ್ರತೆಗಾಗಿ ಪ್ರತಿವಾದಿಯು ತನ್ನ ಮತ್ತು ಮತ್ತೊಬ್ಬ ಸಾಕ್ಷಿದಾರರ ಸಮಕ್ಷಮದಲ್ಲಿ ಪ್ರಾಮಿಸರಿ ನೋಟನ್ನು ವಾದಿಯ ಪರವಾಗಿ ಜಾರಿ ಮಾಡಿಕೊಟ್ಟು ವಾರ್ಷಿಕ ಶೇ.**24%** ರ ಬಡ್ಡಿಯಂತೆ ಮರಳಿ ನೀಡುವುದಾಗಿ ತಿಳಿಸಿರುತ್ತಾನೆ ಎಂದು ನುಡಿದಿರುತ್ತಾರೆ. ವಾದಿಯು ತನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿ.ಪಿ.**1** ರಂತೆ ಒಂದು ಪ್ರಾಮಿಸರಿ ನೋಟನ್ನು, ನಿ.ಪಿ.**2** ರಂತೆ ನೋಟೀಸ್ಸನ್ನು ಮತ್ತು ನಿಪಿ-**3** ರಂತೆ ಅಂಚೆ ರಸೀದಿಯನ್ನು ಹಾಜರುಪಡಿಸಿರುತ್ತಾರೆ.

**12.** ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಸಾಬೀತುಪಡಿಸಲು ತನ್ನನ್ನು ತಾನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ವಿಚಾರಣೆ ಮಾಡಿಕೊಂಡಿದ್ದು, ಸದರಿ ಡಿ.ಡಬ್ಲ್ಯೂ.1 ರವರು ತಮ್ಮ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಸದರಿ ಪ್ರಮಾಣ ಪತ್ರದಲ್ಲಿ ಪ್ರತಿವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ. ಡಿ.ಡಬ್ಲ್ಯೂ.1 ರವರು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ಯು.ಮಲ್ಲಿಕಾರ್ಜುನ ಎಂಬುವವರನ್ನು ಡಿ.ಡಬ್ಲ್ಯೂ.2 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರತಿವಾದಿಯು ತನ್ನ ಮೌಖಿಕ ಸಾಕ್ಷಕ್ಕೆ ಪೂರಕವಾಗಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

**13.** ಈ ಮೇಲಿನ ಉಭಯ ಪಕ್ಷಗಾರರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಹಾಗೂ ವಾದ ವಿವಾದಗಳನ್ನು ಪರಿಶೀಲಿಸಲಾಯಿತು. ವಾದಿಯ ಪ್ರಕಾರ ಪ್ರತಿವಾದಿಯು ತನ್ನಿಂದ ದಿನಾಂಕ **05.02.2019** ರಂದು ರೂ.**1,75,000/-** ಹಣವನ್ನು ಸಾಲವಾಗಿ ಪಡೆದು, ಅದೇ ದಿನ ತನ್ನ ಪರವಾಗಿ ಪ್ರಾಮಿಸರಿ ನೋಟನ್ನು ಪ್ರತಿವಾದಿಯು ಜಾರಿ ಮಾಡಿಕೊಟ್ಟಿರುತ್ತಾರೆ ಎಂಬುದಾಗಿರುತ್ತದೆ. ಇದಕ್ಕೆಪ್ರತಿಯಾಗಿ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ನಿರ್ಧಿಷ್ಟವಾಗಿ ಅಲ್ಲಗಳೆದು, ವಾದಿಯು ತನ್ನ ರಾಜಕೀಯ ಪ್ರಭಾವದಿಂದ ತನ್ನನ್ನು ಕುರುಗೋಡು ಪೋಲೀಸ್ ಠಾಣೆಗೆ ಕರೆದು ಬಲವಂತವಾಗಿ ಇ.ಸ್ಟ್ಯಾಂಟ್ ಪೇಪರ್ ಮೇಲೆ ತನ್ನ ಸಹಿಯನ್ನು ಪಡೆದು ಪ್ರಾಮಿಸರಿ ನೋಟನ್ನು ಸೃಷ್ಟಿಸಿರುತ್ತಾರೆ ಎಂದು ಹೇಳಿರುತ್ತಾರೆ.

**14**. ಈ ಕುರಿತು ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ರುಜುವಾತು ಪಡಿಸಲು ವಾದಿಯು ನಿ.ಪಿ.1 ರಂತೆ ಪ್ರಾಮಿಸರಿ ನೋಟನ್ನು ಹಾಜರುಪಡಿಸಿದ್ದು, ಸದರಿ ನಿ.ಪಿ.1 ರ ಪ್ರಾಮಿಸರಿ ನೋಟನ್ನು ಪರಿಶೀಲಿಸಿದಾಗ ದಿನಾಂಕ:**05.02.2019** ರಂದು ವಾದಿಯಾದ ವಿ.ರಾಮಾಂಜಿನೇಯಲು ತಂದೆ ದಿವಂಗತ ವಿ.ನಾಗಪ್ಪರವರಿಂದ ಎಸ್.ಲಕ್ಷ್ಮೀನಾರಾಯಣ ತಂದೆ ಎಸ್.ಪುಲ್ಲಯ್ಯರವರು

ರೂ.1,75,000/- ಹಣವನ್ನು ತಿಂಗಳು ಒಂದಕ್ಕೆ ನೂರಕ್ಕೆ 2 ರೂಪಾಯಿ ಪ್ರಕಾರ ಬಡ್ಡಿಯಂತೆ ಹಣವನ್ನು ಪಡೆದಿರುವ ಬಗ್ಗೆ ಹಾಗೂ ಸದರಿ ನಿ.ಪಿ.1 ರ ದಾಖಲಾತಿಯನ್ನು ಎಸ್.ಲಕ್ಷ್ಮೀನಾರಾಯಣ ತಂದೆ ಎಸ್.ಪುಲ್ಲಯ್ಯರವರು ವಾದಿಯ ಪರವಾಗಿ ಸಾಕ್ಷಿದಾರರ ಸಮಕ್ಷಮ ಜಾರಿ ಮಾಡಿಕೊಟ್ಟಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಕುರಿತು ಉಭಯ ಪಕ್ಷಗಾರರ ಪಾಟೀ ಸವಾಲನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ.

15. ಪಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು ಪ್ರತಿವಾದಿಗೆ ರೂ.1,75,000/- ಹಣವನ್ನು ತಮ್ಮ ಮನೆಯಲ್ಲಿ ಕೊಟ್ಟಿರುತ್ತೇನೆ. ತನ್ನ ವಾದಪತ್ರದಲ್ಲಿ ತಾನು ಪ್ರತಿವಾದಿಗೆ ತಮ್ಮ ಮನೆಯಲ್ಲಿ ಹಣವನ್ನು ಕೊಟ್ಟಿರುವ ವಿಚಾರವನ್ನು ನಮೂದಿಸಿಲ್ಲ ಎಂದರೆ ಸರಿ. ತಾನು ಪ್ರತಿವಾದಿಗೆ ಬೆಃ 12.00 ರಿಂದ 1.00 ಗಂಟೆಯ ಮಧ್ಯದಲ್ಲಿ ಹಣವನ್ನು ಕೊಟ್ಟಿರುತ್ತೇನೆ. ತಾನು ಹಣವನ್ನು ಪ್ರತಿವಾದಿಗೆ ಕೊಟ್ಟಿರುವ ಸಮಯದಲ್ಲಿ ನಿಪಿ.1 ರ ಪ್ರಾಮಿಸರಿ ನೋಟನ್ನು ಬರೆಯಿಸಿಕೊಂಡಿರುತ್ತೇನೆ. ನಿ.ಪಿ.1 ರ ಪ್ರಾಮಿಸರಿ ನೋಟನ್ನು ಪ್ರತಿವಾದಿಯೇ ಬರೆದುಕೊಂಡು ಬಂದಿದ್ದರು. ನಿ.ಪಿ.1 ರ ಪ್ರಾಮಿಸರಿ ನೋಟನ್ನು ಪ್ರತಿವಾದಿಯೇ ಟೈಪು ಮಾಡಿಕೊಂಡು ಬಂದಿದ್ದರು. ತಾನು ತನ್ನ ವಾದಪತ್ರದಲ್ಲಿ ನಿಪಿ1. ರ ಪ್ರಾಮಿಸರಿ ನೋಟನ್ನು ಬರೆದಿರುತ್ತಾರೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ . ನಿ.ಪಿ.1 ರ ಪ್ರಾಮಿಸರಿ ನೋಟನ್ನು ಬರೆಯಲು ಬಾಂಡ್ ಪೇಪರನ್ನು ಪ್ರತಿವಾದಿಯೇ ತಂದಿರುತ್ತಾರೆ. ನಿ.ಪಿ.1 ರ ದಾಖಲಾತಿಯು ಬಾಂಡ್ ಪೇಪರ್ ಇರುತ್ತದೆ ಎಂದರೆ ಸರಿ. ನಿ.ಪಿ.1 ರ ಪ್ರಾಮಿಸರಿ ನೋಟಿನಲ್ಲಿ **Description** ಕಾಲಂ ನಲ್ಲಿ ಅಗ್ರಿಮೆಂಟ್ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಅಗ್ರಿಮೆಂಟಿಗೂ ಮತ್ತು ಪ್ರಾಮಿಸರಿ ನೋಟಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ತಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುವುದರಿಂದ ತಾನು ಕರಾರು ಪತ್ರಗಳನ್ನು ಮಾಡುತ್ತೇನೆ ಎಂದರೆ ಸರಿ. ನಿ.ಪಿ.1 ರ ಪ್ರಾಮಿಸರಿ ನೋಟಿನಲ್ಲಿ ಬರೆದಿರುವ ಅಂಶಗಳ ಬಗ್ಗೆ ತನಗೆ ಗೊತ್ತು ಎಂದು ಹೇಳಿರುತ್ತಾರೆ.

**16.** ಮುಂದುವರೆದು ಹೇಳುವುದೇನೆಂದರೆ ತಾನು ಪ್ರತಿವಾದಿಗೆ ಕೊಟ್ಟಿದ್ದೇನೆಂದು ಹೇಳುವ ಹಣವು **100** ರೂ. ಮುಖ ಬೆಲೆಯ ನೋಟುಗಳಾಗಿರುತ್ತವೆ. ಈ ಕುರಿತು ತಾನು ತನ್ನ ವಾದಪತ್ರದಲ್ಲಿ ಮತ್ತು ಮುಖ್ಯ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ತಾನು ಪ್ರತಿವಾದಿಗೆ ಹಣವನ್ನು ಕೊಟ್ಟಿದ್ದೇನೆ ಎಂದು ಹೇಳುವ ಸಮಯದಲ್ಲಿ ತಾನು, ಲಕ್ಷ್ಮೀನಾರಾಯಣ, ಮಲ್ಲಿಕಾರ್ಜುನ ಮತ್ತು ನಾಗರಾಜ ಎಂಬುವವರು ಇದ್ದೆವು. ನಾಗರಾಜ ಎಂಬುವವರು ತನಗೆ ಸಂಭಂದಿಕರಾಗಬೇಕು ಎಂದರೆ ಸಾಕ್ಷಿಯು ಸದರಿ ನಾಗರಾಜ ರವರು ತನ್ನ ಕುಲಸ್ಥರಾಗಬೇಕು ಎಂದು ಹೇಳುತ್ತಾರೆ. ನಿ.ಪಿ.**1** ರ ದಾಖಲಾತಿಗೆ ಪ್ರತಿವಾದಿ ಮತ್ತು ಇಬ್ಬರು ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ತಾನು ದಿಃ **05.02.2019** ರಂದು ಪ್ರತಿವಾದಿಗೆ ಯಾವುದೇ ಹಣವನ್ನು ಕೊಟ್ಟಿಲ್ಲ ಮತ್ತು ಪ್ರತಿವಾದಿ ಹಾಗೂ ಇಬ್ಬರು ಸಾಕ್ಷಿದಾರರು ನಿ.ಪಿ.**1** ರ ಪ್ರಾಮಿಸರಿ ನೋಟಿಗೆ ಯಾವುದೇ ಸಹಿಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅನಂತಪುರ ಜಿಲ್ಲೆಯ ಪಾಮಿಡಿ ಗ್ರಾಮದ ವೆಂಕಟೇಶ ಎಂಬುವವರು ತನಗೆ ಪರಿಚಯ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ವೆಂಕಟೇಶ ರವರ ಮಧ್ಯೆ ಹಣಕಾಸಿನ ವ್ಯವಹಾರ ಇದ್ದು, ಸದರಿರವರುಗಳನ್ನು ತಾನು ಪೊಲೀಸ್ ಠಾಣೆಗೆ ಕರೆಯಿಸಿ ಅವರ ಮಧ್ಯೆ ಮಾತುಕತೆ ಮಾಡಿಸಿ, ಮಾತುಕತೆಯ ಸಮಯದಲ್ಲಿ ತಾನು ಪ್ರತಿವಾದಿಯಿಂದ ಬಲವಂತವಾಗಿ ಖಾಲಿ ಬಾಂಡ್ ಪೇಪರ್ ಮೇಲೆ ಸಹಿ ಪಡೆದು ನಿ.ಪಿ.**1** ರ ಪ್ರಾಮಿಸರಿ ನೋಟನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.**1** ರ ಪ್ರಾಮಿಸರಿ ನೋಟಿನಲ್ಲಿ ಪ್ರತಿವಾದಿಯು ಸಹಿ ಮಾಡಿದ್ದಾರೆಂದು ಹೇಳುವ ಸ್ಥಳದಲ್ಲಿ ಪೆನ್ನಿನಿಂದ ಟಿಕ್ ಮಾಡಲಾಗಿರುತ್ತದೆ ಎಂದರೆ ಸರಿ. ನಿ.ಪಿ.**1** ರ ಪ್ರಾಮಿಸರಿ ನೋಟಿನ ಎರಡನೇ ಪುಟದಲ್ಲಿ ಬರೆದುಕೊಟ್ಟವರು ಎಂಬ ಬರವಣಿಗೆ ಇಲ್ಲ ಎಂದರೆ ಸರಿ. ನಿ.ಪಿ.**1** ರ ಪ್ರಾಮಿಸರಿ ನೋಟಿನಲ್ಲಿ ಸಾಕ್ಷಿದಾರರ ಸಹಿಗಳು ಇರುವ ಸ್ಥಳಕ್ಕೂ ಮತ್ತು ಅಂಶ ತಯಾರಕರ ಸಹಿಗಳ ಮಧ್ಯೆ ಸ್ವಲ್ಪ ಗ್ಯಾಪ್ ಇರುತ್ತದೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

**17.** ಪಿ.ಡಬ್ಲ್ಯೂ2 ರವರು ತಮ್ಮ ಪಾಟೀ ಸವಾಲಿನಲ್ಲಿ ವಾದಿಯು ವ್ಯವಸಾಯ ಮತ್ತು ಜಮೀನುಗಳನ್ನು ಕೊಡಿಸುವ ಉದ್ಯೋಗವನ್ನು ಮಾಡುತ್ತಾನೆ.

ಪ್ರತಿವಾದಿಯು ವ್ಯವಸಾಯದ ಉದ್ಯೋಗವನ್ನು ಮಾಡುತ್ತಾನೆ. ವಾದಿಯಿಂದ ಪ್ರತಿವಾದಿಯು ಮಧ್ಯಾಹ್ನದ ಸಮಯದಲ್ಲಿ ಹಣವನ್ನು ಪಡೆದಿರುತ್ತಾನೆ. ವಾದಿಯಿಂದ ಪ್ರತಿವಾದಿಯು ಮಧ್ಯಾಹ್ನದ ಸಮಯದಲ್ಲಿ ಹಣವನ್ನು ಪಡೆದಿರುವ ವಿಚಾರವನ್ನು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ ವಾದಿಯು ಪ್ರತಿವಾದಿಗೆ ಹಣವನ್ನು ವಾದಿಯ ಮನೆಯಲ್ಲಿ ಕೊಟ್ಟಿರುತ್ತಾನೆ. ವಾದಿಯು ಪ್ರತಿವಾದಿಗೆ ಹಣವನ್ನು ಕೊಡುವ ಸಮಯದಲ್ಲಿ ತಾನು, ವಾದಿ, ಪ್ರತಿವಾದಿ ಮತ್ತು ಮಲ್ಲಿಕಾರ್ಜುನ ಎಂಬುವವರು ಇದ್ದೆವು. ವಾದಿಯು ಪ್ರತಿವಾದಿಗೆ **100** ರೂ. ಮುಖ ಬೆಲೆಯ ನೋಟುಗಳನ್ನು ಕೊಟ್ಟಿರುತ್ತಾನೆ. ಪ್ರತಿವಾದಿಯು ವಾದಿಯಿಂದ ಹಣವನ್ನು ಪಡೆಯುವ ಮೊದಲೇ ಪ್ರತಿವಾದಿಯು ಪ್ರಾಮಿಸರಿ ನೋಟನ್ನು ಬರೆಸಿಕೊಂಡು ಬಂದಿರುತ್ತಾನೆ. ವಾದಿಯು ಪ್ರತಿವಾದಿಗೆ ಯಾವುದೇ ಹಣವನ್ನು ಕೊಟ್ಟಿಲ್ಲ ಮತ್ತು ಯಾವುದೇ ಪ್ರಾಮಿಸರಿ ನೋಟನ್ನು ಪ್ರತಿವಾದಿಯು ವಾದಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿ.ಪಿ.**1** ರ ಪ್ರಾಮಿಸರಿ ನೋಟನ್ನು ಗಣಕೀಕೃತ ಮಾಡಲಾಗಿರುತ್ತದೆ. ನಿ.ಪಿ.**1** ರ ಪ್ರಾಮಿಸರಿ ನೋಟಿನ ಮೊದಲನೇ ಮತ್ತು ಎರಡನೇ ಪುಟಗಳಲ್ಲಿ ಸೀಸ್ ಪೆನ್ಸಿಲ್ ನಿಂದ ಟಿಕ್ ಮಾಡಲಾಗಿರುತ್ತದೆ ಎಂದರೆ ಸರಿ. ನಿ.ಪಿ.**1** ರ ಪ್ರಾಮಿಸರಿ ನೋಟಿನ ಸಾಕ್ಷಿದಾರರ ಸಹಿಗಳಿಗೂ ಮತುತ ಬಿಕ್ಕಲಾಂ ದಾರರ ಸಹಿ ಮಧ್ಯೆ ಸ್ವಲ್ಪ ಗ್ಯಾಪ್ ಇರುತ್ತದೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

**18.** ಈ ಮೇಲಿನ ಪಿ.ಡಬ್ಲ್ಯೂ.**1** ಮತ್ತು **2** ರವರ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ ಸದರಿ ಸಾಕ್ಷಿದಾರರುಗಳು ತಮ್ಮ ಸಾಕ್ಷ್ಯಗಳಲ್ಲಿ ವಾದಿಯು ಪ್ರತಿವಾದಿಗೆ ದಿನಾಂಕಃ **05.02.2019** ರಂದು ರೂ.**1,75,000/-**ಹಣವನ್ನು ಕೊಟ್ಟಿರುವ ಬಗ್ಗೆ ಮತ್ತು ಸದರಿ ದಿನದಂದು ಪ್ರತಿವಾದಿಯು ವಾದಿಯ ಪರವಾಗಿ ನಿಶಾನೆ ಪಿ.**1** ರಂತೆ ಪ್ರಾಮಿಸರಿ ನೋಟನ್ನು ಜಾರಿ ಮಾಡಿಕೊಟ್ಟಿರುವ ಕುರಿತು ನಿರ್ಧಿಷ್ಟವಾಗಿ ಸಾಕ್ಷ್ಯವನ್ನು ನುಡಿದಿರುವುದು ಕಂಡು ಬರುತ್ತದೆ.

**19.** ಅದೇ ರೀತಿಯಾಗಿ ಸದರಿ ಪಿ.ಡಬ್ಲ್ಯೂ.1 ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ತಾನು ಪ್ರತಿವಾದಿಗೆ ರೂ.**1,75,000/-** ಹಣವನ್ನು ತಮ್ಮ ಮನೆಯಲ್ಲಿ ಕೊಟ್ಟಿರುತ್ತೇನೆ. ತನ್ನ ವಾದಪತ್ರದಲ್ಲಿ ತಾನು ಪ್ರತಿವಾದಿಗೆ ತಮ್ಮ ಮನೆಯಲ್ಲಿ ಹಣವನ್ನು ಕೊಟ್ಟಿರುವ ವಿಚಾರವನ್ನು ನಮೂದಿಸಿಲ್ಲ. ತಾನು ಪ್ರತಿವಾದಿಗೆ ಬೆಃ **12.00** ರಿಂದ **1.00** ಗಂಟೆಯ ಮಧ್ಯದಲ್ಲಿ ಹಣವನ್ನು ಕೊಟ್ಟಿರುತ್ತೇನೆ. ತಾನು ಹಣವನ್ನು ಪ್ರತಿವಾದಿಗೆ ಕೊಟ್ಟಿರುವ ಸಮಯದಲ್ಲಿ ನಿಪಿ.**1** ರ ಪ್ರಾಮಿಸರಿ ನೋಟನ್ನು ಬರೆಯಿಸಿಕೊಂಡಿರುತ್ತೇನೆ. ನಿ.ಪಿ.**1** ರ ಪ್ರಾಮಿಸರಿ ನೋಟನ್ನು ಪ್ರತಿವಾದಿಯೇ ಬರೆದುಕೊಂಡು ಬಂದಿದ್ದರು. ನಿ.ಪಿ.**1** ರ ಪ್ರಾಮಿಸರಿ ನೋಟನ್ನು ಪ್ರತಿವಾದಿಯೇ ಟೈಪು ಮಾಡಿಕೊಂಡು ಬಂದಿದ್ದರು. ತಾನು ತನ್ನ ವಾದಪತ್ರದಲ್ಲಿ ನಿಪಿ**1.** ರ ಪ್ರಾಮಿಸರಿ ನೋಟನ್ನು ಬರೆದಿರುತ್ತಾರೆ ಎಂದು ನಮೂದಿಸಲಾಗಿರುತ್ತದೆ . ನಿ.ಪಿ.**1** ರ ಪ್ರಾಮಿಸರಿ ನೋಟನ್ನು ಬರೆಯಲು ಬಾಂಡ್ ಪೇಪರನ್ನು ಪ್ರತಿವಾದಿಯೇ ತಂದಿರುತ್ತಾರೆ. ನಿ.ಪಿ.**1** ರ ದಾಖಲಾತಿಯು ಬಾಂಡ್ ಪೇಪರ್ ಇರುತ್ತದೆ. ನಿ.ಪಿ.**1** ರ ಪ್ರಾಮಿಸರಿ ನೋಟಿನಲ್ಲಿ **Description** ಕಾಲಂ ನಲ್ಲಿ ಅಗ್ರಿಮೆಂಟ್ ಎಂದು ನಮೂದಿಸಲಾಗಿರುತ್ತದೆ. ಅಗ್ರಿಮೆಂಟಿಗೂ ಮತ್ತು ಪ್ರಾಮಿಸರಿ ನೋಟಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ತಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುವುದರಿಂದ ತಾನು ಕರಾರು ಪತ್ರಗಳನ್ನು ಮಾಡುತ್ತೇನೆ ನಿ.ಪಿ.**1** ರ ಪ್ರಾಮಿಸರಿ ನೋಟಿನಲ್ಲಿ ಬರೆದಿರುವ ಅಂಶಗಳ ಬಗ್ಗೆ ತನಗೆ ಗೊತ್ತು ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುವುದು ಕಂಡುಬರುತ್ತದೆ. ಅದೇ ರೀತಿಯಾಗಿ ಪಿ.ಡಬ್ಲ್ಯೂ.**2** ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಪಿ.ಡಬ್ಲ್ಯೂ .**2** ರವರು ತಮ್ಮ ಪಾಟೀ ಸವಾಲಿನಲ್ಲಿ ವಾದಿಯು ಪ್ರತಿವಾದಿಗೆ ಹಣವನ್ನು ವಾದಿಯ ಮನೆಯಲ್ಲಿ ಕೊಟ್ಟಿರುತ್ತಾನೆ. ವಾದಿಯು ಪ್ರತಿವಾದಿಗೆ ಹಣವನ್ನು ಕೊಡುವ ಸಮಯದಲ್ಲಿ ತಾನು, ವಾದಿ, ಪ್ರತಿವಾದಿ ಮತ್ತು ಮಲ್ಲಿಕಾರ್ಜುನ ಎಂಬುವವರು ಇದ್ದೆವು. ವಾದಿಯು ಪ್ರತಿವಾದಿಗೆ **100** ರೂ. ಮುಖ ಬೆಲೆಯ ನೋಟುಗಳನ್ನು ಕೊಟ್ಟಿರುತ್ತಾನೆ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುವುದು ಕಂಡುಬರುತ್ತದೆ.

**20.** ಈ ಕುರಿತು ಡಿ.ಡಬ್ಲೂ1 ಮತ್ತು 2 ರವರ ಪಾಟೀ ಸವಾಲನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ. ಡಿ.ಡಬ್ಲ್ಯೂ 1 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು ವಾದಿಯ ಹತ್ತಿರ ರೂ.1,75,000/- ಹಣವನ್ನು ಸಾಲವಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.1 ರ ದಾಖಲಾತಿಯಲ್ಲಿ ಇರುವ ಸಹಿ ತನ್ನದು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹೇಳುವುದೇನೆಂದರೆ ಖಾಲಿ ಬಾಂಡ್ ಪೇಪರ್ ಮೇಲೆ ತನ್ನ ಸಹಿಯನ್ನು ವಾದಿಯು ಪಡೆದಿರುತ್ತಾರೆ ಎಂದು ಹೇಳುತ್ತಾರೆ. ನಿ.ಪಿ.1 ರ ಪ್ರಾಮಿಸರಿ ನೋಟಿಗೆ ಕುರುಗೋಡು ಪೊಲೀಸ್ ಠಾಣೆಯಲ್ಲಿ ವಾದಿಯು ಸಹಿ ಪಡೆದಿರುತ್ತಾನೆ. ನಿ.ಪಿ.1 ರ ಪ್ರಾಮಿಸರಿ ನೋಟಿಗೆ ತಾನು ಸಹಿ ಮಾಡುವ ಸಮಯದಲ್ಲಿ ಯಾರು ಯಾರು ಇದ್ದರು ಮತ್ತು ಯಾವಾಗ ಸಹಿ ಮಾಡಿರುತ್ತೇನೆ ಎಂಬುವುದು ತನಗೆ ಗೊತ್ತಿಲ್ಲ. ವಾದಿಯು ಖಾಲಿ ಪ್ರಾಮಿಸರಿ ನೋಟಿಗೆ ಒತ್ತಾಯ ಪೂರ್ವಕವಾಗಿ ತನ್ನ ಸಹಿಯನ್ನು ಪಡೆದಿದ್ದಾರೆ ಎಂದು ಹೇಳುವ ಕುರಿತು ತಾನು ಯಾವುದೇ ದೂರನ್ನಾಗಲೀ ಅಥವಾ ಖಾಸಗಿ ದೂರನ್ನಾಗಲೀ ವಾದಿಯ ವಿರುದ್ಧ ಸಲ್ಲಿಸಿಲ್ಲ ಎಂದರೆ ಸರಿ ಎಂದು ನುಡಿದಿರುತ್ತಾರೆ.

**21**. ಡಿ.ಡಬ್ಲ್ಯೂ 2 ರವರು ತಮ್ಮ ಪಾಟೀ ಸವಾಲಿನಲ್ಲಿ ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿಯು ಒಂದು ದಾಖಲಾತಿಗೆ ಸಹಿ ಮಾಡಬೇಕಾದರೆ ದಾಖಲಾತಿಯಲ್ಲಿ ಬರೆದಿರುವ ಅಂಶಗಳನ್ನು ಓದಿಯೇ ದಾಖಲಾತಿಗೆ ಸಹಿ ಮಾಡುತ್ತಾರೆ ಎಂದರೆ ಸರಿ. ಪ್ರತಿವಾದಿಯು ತನಗೆ ನಾಗರಾಜ (ಪಿ.ಡಬ್ಲ್ಯೂ2) ಎಂಬುರವರ ಮುಖಾಂತರ ಪರಿಚಯವಾಗಿರುತ್ತಾರೆ. ಪ್ರತಿವಾದಿಯು ತನಗೆ ಸುಮಾರು ಐದು ವರ್ಷಗಳಿಂದ ಪರಿಚಯ ಇರುತ್ತಾರೆ. ನಾಗರಾಜ ಎಂಬುವವರು ಸುಮಾರು 20 ವರ್ಷಗಳಿಂದ ಪರಿಚಯ ಇರುತ್ತಾರೆ. ತನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಯಾವುದೇ ಸಮನ್ಸ ಬಂದಿರುವುದಿಲ್ಲ. ಸಾಕ್ಷಿಯು ಮುಂದುವರೆದು ಹೇಳುವುದೇನೆಂದರೆ ಪ್ರತಿವಾದಿಯು ಮತ್ತು ವಕೀಲರು ಸಾಕ್ಷಿಯನ್ನು ನುಡಿಯಲು ಕರೆದುಕೊಂಡು ಬಂದಿರುತ್ತಾರೆ. ತನಗೆ ಪ್ರತಿವಾದಿಯು ಹೇಳಿರುವಂತೆ ತಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ.1(ಸಿ)

ಸಹಿಯನ್ನು ತೋರಿಸಿ ಸದರಿ ಸಹಿಯು ನಿಮ್ಮದು ಇರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಸಹಿಯನ್ನು ನೋಡಿ ಹೌದು ಎಂದು ನುಡಿದಿರುತ್ತಾರೆ. ತಾನು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯು ತನಗೆ ಪರಿಚಯ ಇರುತ್ತಾನೆ ಎಂದು ನಮೂದಿಸಿಲ್ಲ ಎಂದರೆ ಸರಿ. ವಾದಿಯು ಮತ್ತು ನಾಗರಾಜ **(ಪಿ.ಡಬ್ಲ್ಯೂ2)** ಎಂಬುವವರು ಬೀಗರು ಆಗಬೇಕು. ನೀವು ನಿಪಿ.**1** ರ ದಾಖಲಾತಿಗೆ ಯಾವಾಗ ಮತ್ತು ಎಲ್ಲಿ ಸಹಿ ಮಾಡಿದ್ದೀರ ಎಂಬ ಪ್ರಶ್ನೆಗೆ ಸಾಕ್ಷಿಯು, ವಾದಿಯು ಪ್ರತಿವಾದಿಗೆ ಹಣವನ್ನು ಸಾಲವಾಗಿ ಕೊಟ್ಟಿರುವುದರಿಂದ ನಿಪಿ.**1** ರ ದಾಖಲಾತಿಗೆ ನಾಗರಾಜ ಬಂದು ತನ್ನ ಸಹಿಯನ್ನು ತಮ್ಮ ಮನೆಯಲ್ಲಿ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ.

**22.** ಈ ಮೇಲಿನ ಡಿ.ಡಬ್ಲೂ-**1** ಮತ್ತು **2** ರವರ ಸಾಕ್ಷ್ಯಗಳನ್ನು ಪಶೀಲಿಸಿದಾಗ ಡಿ.ಡಬ್ಲೂ-**1** ರವರು ತಮ್ಮ ಸಾಕ್ಷ್ಯಗಳಲ್ಲಿ ವಾದಿಯಿಂದ ಪ್ರತಿವಾದಿಯು ರೂ.**1,75,000/-** ಹಣವನ್ನು ಪಡೆದಿರುವುದನ್ನು ಮತ್ತು ಪ್ರತಿವಾದಿಯು ವಾದಿಯ ಪರವಾಗಿ ನಿಶಾನೆ ಪಿ.**1** ರ ಪ್ರಾಮಿಸರಿ ನೋಟನ್ನು ಜಾರಿ ಮಾಡಿಕೊಟ್ಟಿರುವುದನ್ನು ನಿರ್ಧಿಷ್ಟವಾಗಿ ಅಲ್ಲಗಳೆದಿರುವುದು ಕಂಡು ಬರುತ್ತದೆ. ಅದೇ ರೀತಿಯಾಗಿ ಡಿ.ಡಬ್ಲ್ಯೂ**1** ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಡಿ.ಡಬ್ಲ್ಯೂ .**1** ರವರು ತಮ್ಮ ಪಾಟೀ ಸವಾಲಿನಲ್ಲಿ ನಿ.ಪಿ.**1** ರ ದಾಖಲಾತಿಯಲ್ಲಿ ಇರುವ ಸಹಿ ತನ್ನದು ಇರುತ್ತದೆ, ಖಾಲಿ ಬಾಂಡ್ ಪೇಪರ್ ಮೇಲೆ ತನ್ನ ಸಹಿಯನ್ನು ವಾದಿಯು ಪಡೆದಿರುತ್ತಾರೆ, ನಿ.ಪಿ.**1** ರ ಪ್ರಾಮಿಸರಿ ನೋಟಿಗೆ ಕುರುಗೋಡು ಪೊಲೀಸ್ ಠಾಣೆಯಲ್ಲಿ ವಾದಿಯು ಸಹಿ ಪಡೆದಿರುತ್ತಾನೆ, ವಾದಿಯು ಖಾಲಿ ಪ್ರಾಮಿಸರಿ ನೋಟಿಗೆ ಒತ್ತಾಯ ಪೂರ್ವಕವಾಗಿ ತನ್ನ ಸಹಿಯನ್ನು ಪಡೆದಿದ್ದಾರೆ ಎಂದು ಹೇಳುವ ಕುರಿತು ತಾನು ಯಾವುದೇ ದೂರನ್ನಾಗಲೀ ಅಥವಾ ಖಾಸಗಿ ದೂರನ್ನಾಗಲೀ ವಾದಿಯ ವಿರುದ್ಧ ಸಲ್ಲಿಸಿಲ್ಲ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುವುದು ಕಂಡು ಬರುತ್ತದೆ.

**23.** ಅದೇ ರೀತಿ ಡಿ.ಡಬ್ಲೂ-**2** ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಡಿ.ಡಬ್ಲ್ಯೂ. **2** ರವರು ತಮ್ಮ ಪಾಟೀ ಸವಾಲಿನಲ್ಲಿ ಯಾವುದೇ ಒಬ್ಬ ವ್ಯಕ್ತಿಯು ಒಂದು

ದಾಖಲಾತಿಗೆ ಸಹಿ ಮಾಡಬೇಕಾದರೆ ದಾಖಲಾತಿಯಲ್ಲಿ ಬರೆದಿರುವ ಅಂಶಗಳನ್ನು ಓದಿಯೇ ದಾಖಲಾತಿಗೆ ಸಹಿ ಮಾಡುತ್ತಾರೆ, ಪ್ರತಿವಾದಿಯು ತನಗೆ ನಾಗರಾಜ (ಪಿ.ಡಬ್ಲ್ಯೂ.2) ಎಂಬುರವರ ಮುಖಾಂತರ ಪರಿಚಯವಾಗಿರುತ್ತಾರೆ, ಪ್ರತಿವಾದಿಯು ತನಗೆ ಸುಮಾರು ಐದು ವರ್ಷಗಳಿಂದ ಪರಿಚಯ ಇರುತ್ತಾರೆ, ನಾಗರಾಜ ಎಂಬುವವರು ಸುಮಾರು **20** ವರ್ಷಗಳಿಂದ ಪರಿಚಯ ಇರುತ್ತಾರೆ, ವಾದಿಯು ಪ್ರತಿವಾದಿಗೆ ಹಣವನ್ನು ಸಾಲವಾಗಿ ಕೊಟ್ಟಿರುವುದರಿಂದ ನಿಪಿ.**1** ರ ದಾಖಲಾತಿಗೆ ನಾಗರಾಜ ಬಂದು ತನ್ನ ಸಹಿಯನ್ನು ತಮ್ಮ ಮನೆಯಲ್ಲಿ ಪಡೆದಿರುತ್ತಾರೆ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುವುದು ಕಂಡುಬರುತ್ತದೆ.

**24.** ಈ ಮೇಲಿನ ಡಿ.ಡಬ್ಲ್ಯೂ.**1** ರವರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಪ್ರತಿವಾದಿಯು ವಾದಿಯಿಂದ ರೂ.**1,75,000/-** ಹಣವನ್ನು ಪಡೆದು ನಿ.ಪಿ.**1** ರ ದಾಖಲಾತಿಯನ್ನು ವಾದಿಯ ಪರವಾಗಿ ಜಾರಿ ಮಾಡಿಕೊಟ್ಟಿರುವ ಬಗ್ಗೆ ನಿರ್ಧಿಷ್ಟವಾಗಿ ಪ್ರತಿವಾದಿಯು ಅಲ್ಲಗಳೆದು, ತಾನು ವಾದಿಯಿಂದ ಯಾವುದೇ ಹಣವನ್ನು ಸಾಲವಾಗಿ ಪಡೆದಿಲ್ಲ ಮತ್ತು ವಾದಿಯು ನಿಶಾನೆ ಪಿ.**1** ರ ಪ್ರಾಮಿಸರಿ ನೋಟನ್ನು ಸೃಷ್ಟಿಸಿರುತ್ತಾನೆ ಎಂದು ನುಡಿದಿರುವುದು ಕಂಡುಬರುತ್ತದೆ. ಆದರೆ ಡಿ.ಡಬ್ಲ್ಯೂ .**1** ಮತ್ತು **2** ರವರು ನಿಶಾನೆ ಪಿ. **1** ರ ಪ್ರಾಮಿಸರಿ ನೋಟಿನ ಮೇಲಿರುವ ಸಹಿಗಳು ತಮ್ಮದು ಇರುತ್ತವೆ ಎಂದು ಒಪ್ಪಿಕೊಂಡಿರುತ್ತಾರೆ. ಹಾಗಾಗಿ ಡಿ.ಡಬ್ಲ್ಯೂ .**1** ಮತ್ತು **2** ರವರು ನಿಶಾನೆ ಪಿ.**1** ರ ಪ್ರಾಮಿಸರಿ ನೋಟಿನಲ್ಲಿರುವ ತಮ್ಮ ಸಹಿಗಳನ್ನು ಒಪ್ಪಿಕೊಂಡಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

**25.** ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ನಿ.ಪಿ.**1** ರ ಪ್ರಾಮಿಸರಿ ನೋಟನ್ನು ವಾದಿಯು ಸೃಷ್ಟಿಸಿರುತ್ತಾರೆ ಎಂದು ಹೇಳಿರುತ್ತಾರೆ. ವಾದಿಯು ನಿ.ಪಿ.**1** ರ ಪ್ರಾಮಿಸರಿ ನೋಟನ್ನು ಜಾರಿ ಮಾಡಿಕೊಟ್ಟಿರುತ್ತಾರೆ ಎಂಬುದು ಪ್ರತಿವಾದಿಗೆ ತಿಳಿದ ನಂತರವೂ ಕೂಡ ಪ್ರತಿವಾದಿಯು ವಾದಿಯ ವಿರುದ್ಧ ವಾದಿಯು ಸೃಷ್ಟಿಸಿದ ನಿ.ಪಿ.**1** ರ ಪ್ರಾಮಿಸರಿ ನೋಟಿನ ಕುರಿತು ಯಾವುದೇ ಕಾನೂನು ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ. ಒಂದು ವೇಳೆ ವಾದಿಯು ನಿ.ಪಿ.**1** ರ ದಾಖಲಾತಿಯನ್ನು

ನಿಜವಾಗಿಯೂ ಸೃಷ್ಟಿಸಿದ್ದರೆ ವಾದಿ ಹಾಗೂ ಪೊಲೀಸರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಏನು ತೊಂದರೆ ಇತ್ತು ಎಂಬುದರ ಕುರಿತು ಕೂಡ ಪ್ರತಿವಾದಿಯು ಯಾವುದೇ ಕಾರಣಗಳನ್ನು ನೀಡಿರುವುದಿಲ್ಲ. ಅದೇ ರೀತಿಯಾಗಿ ವಾದಿಯು ಖಾಲಿ ಇ-ಸ್ಟ್ಯಾಂಪ್ ಪೇಪರ್ ಮೇಲೆ ಪ್ರತಿವಾದಿಯ ಸಹಿಯನ್ನು ಯಾವಾಗ ಹಾಗೂ ಯಾರ ಸಮಕ್ಷಮದಲ್ಲಿ ಪಡೆದಿರುತ್ತಾರೆ ಎಂಬುದರ ಕುರಿತು ಸಹ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಹಾಗೂ ತಮ್ಮ ಸಾಕ್ಷ್ಯಗಳಲ್ಲಿ ಹೇಳಿರುವುದಿಲ್ಲ

**26**. ವಾದಿಯು ತನ್ನ ವಾದಪತ್ರದಲ್ಲಿ ಪ್ರತಿವಾದಿಯು **ನಿ.ಪಿ.1** ರ ದಾಖಲಾತಿಯನ್ನು ಜಾರಿ ಮಾಡಿಕೊಟ್ಟಿರುತ್ತಾರೆಂದು ನಿರ್ಧಿಷ್ಟವಾಗಿ ಹೇಳಿರುತ್ತಾರೆ. ಈ ಕುರಿತು ಪಿ.ಡಬ್ಲ್ಯೂ **1** ಮತ್ತು **2** ರವರು ಸಹ ತಮ್ಮ ಸಾಕ್ಷ್ಯದಲ್ಲಿ ಪ್ರತಿವಾದಿಯು **ರೂ.1,75,000/-** ಹಣವನ್ನು ವಾದಿಯಿಂದ ಪಡೆದಿರುವ ಬಗ್ಗೆ ಮತ್ತು ಈ ಕುರಿತು **ನಿ.ಪಿ. 1** ರ ಪ್ರಾಮಿಸರಿ ನೋಟನ್ನು ಜಾರಿ ಮಾಡಿಕೊಟ್ಟಿರುವ ಬಗ್ಗೆ ನಿರ್ಧಿಷ್ಟವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಪಿ.ಡಬ್ಲ್ಯೂ-1 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು ಪ್ರತಿವಾದಿಗೆ ರೂ.1,75,000/- ಹಣವನ್ನು ತಮ್ಮ ಮನೆಯಲ್ಲಿ ಕೊಟ್ಟಿರುತ್ತೇನೆ. ತನ್ನ ವಾದಪತ್ರದಲ್ಲಿ ತಾನು ಪ್ರತಿವಾದಿಗೆ ತಮ್ಮ ಮನೆಯಲ್ಲಿ ಹಣವನ್ನು ಕೊಟ್ಟಿರುವ ವಿಚಾರವನ್ನು ನಮೂದಿಸಿಲ್ಲ ಎಂದರೆ ಸರಿ. ತಾನು ಪ್ರತಿವಾದಿಗೆ ಬೆಃ 12.00 ರಿಂದ 1.00 ಗಂಟೆಯ ಮಧ್ಯದಲ್ಲಿ ಹಣವನ್ನು ಕೊಟ್ಟಿರುತ್ತೇನೆ ಎಂದು ನುಡಿದಿರುವುದು ಕಂಡು ಬರುತ್ತದೆ. . ವಾದಿಯು ಹಾಜರುಪಡಿಸಿರುವ ನಿಶಾನೆ ಪಿ.1 ರ ಪ್ರಾಮಿಸರಿ ನೋಟನ್ನು ಪರಿಶೀಲಿಸಿದಾಗ ದಿನಾಂಕಃ05.02.2019 ರಂದು ವಾದಿಯಾದ ವಿ.ರಾಮಾಂಜಿನೇಯಲು ತಂದೆ ದಿವಂಗತ ವಿ.ನಾಗಪ್ಪರವರಿಂದ ಎಸ್.ಲಕ್ಷ್ಮೀನಾರಾಯಣ ತಂದೆ ಎಸ್.ಪುಲ್ಲಯ್ಯರವರು ರೂ.1,75,000/- ಹಣವನ್ನು ತಿಂಗಳು ಒಂದಕ್ಕೆ ನೂರಕ್ಕೆ 2 ರೂಪಾಯಿ ರ ಪ್ರಕಾರ ಬಡ್ಡಿಯಂತೆ ಹಣವನ್ನು ಪಡೆದಿರುವ ಬಗ್ಗೆ ಹಾಗೂ ಸದರಿ ನಿ.ಪಿ.1 ರ ದಾಖಲಾತಿಯನ್ನು ಎಸ್.ಲಕ್ಷ್ಮೀನಾರಾಯಣರವರು ವಾದಿಯ ಪರವಾಗಿ ಸಾಕ್ಷಿದಾರರ ಸಮಕ್ಷಮ ಜಾರಿ ಮಾಡಿಕೊಟ್ಟಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ನಿಶಾನೆ ಪಿ. 1 ನ್ನು

ಪರಿಶೀಲಿಸಿದಾಗ ನಿಶಾನೆ ಪಿ. 1 ರಲ್ಲಿ ಪ್ರಮಾಣ ಪತ್ರವನ್ನು ನೀಡಿದ ಸಮಯವನ್ನು 3.02 ಪಿ.ಎಂ. ಎಂದು ನಮೂದಾಗಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಮನುಷ್ಯನಿಂದ ಮನುಷ್ಯನಿಗೆ ನೆನಪಿನ ಶಕ್ತಿಯಲ್ಲಿ ವ್ಯತ್ಯಾಸ ಇರುತ್ತದೆ. ವಾದಿಯು ತಾನು ಪ್ರತಿವಾದಿಗೆ ಬೆ:12.00 ರಿಂದ 1.00 ಗಂಟೆಯ ಮಧ್ಯದಲ್ಲಿ ಹಣವನ್ನು ಕೊಟ್ಟಿರುತ್ತೇನೆ ಎಂದು ನುಡಿದಿರುವುದು ವಾದಿಯ ಪ್ರಕರಣಕ್ಕೆ ಯಾವುದೇ ರೀತಿಯಲ್ಲಿ ಭಾದಕವಾಗುವುದಿಲ್ಲ.

**27.** ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯು ತನ್ನ ರಾಜಕೀಯ ಪ್ರಭಾವದಿಂದ ತನ್ನನ್ನು ಕುರುಗೋಡು ಪೋಲೀಸ್ ಠಾಣೆಗೆ ಕರೆದು ಇ.ಸ್ಟ್ಯಾಂಟ್ ಪೇಪರ್ ಮೇಲೆ ತನ್ನ ಸಹಿಯನ್ನು ಪಡೆದು ಪ್ರಾಮಿಸರಿ ನೋಟನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಪ್ರತಿರಕ್ಷಣೆಗಳನ್ನು ತೆಗೆದುಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ ಮಾನ್ಯ ವಾದಿ ಪರ ವಕೀಲರು ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ತೆಗೆದುಕೊಂಡಿರುವ ಪ್ರತಿರಕ್ಷಣೆಗಳನ್ನು ನಿರ್ಧಿಷವಾಗಿ ಅಲ್ಲಗಳೆದಿರುತ್ತಾರೆ.

**28.** ಸಿವಿಲ್ ದಾವೆಗಳಲ್ಲಿ ಮೌಖಿಕ ಸಾಕ್ಷ್ಯಕ್ಕಿಂತ ದಾಖಲಾತಿ ಸಾಕ್ಷ್ಯವು ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಈ ದಾವೆಯಲ್ಲಿ ವಾದಿಯು ನಿ.ಪಿ.**1** ರಂತೆ ದಾಖಲಾತಿ ಸಾಕ್ಷ್ಯವನ್ನು ಹಾಜರುಪಡಿಸಿರುತ್ತಾರೆ. ನಿ.ಪಿ.**1** ರ ದಾಖಲಾತಿಯಲ್ಲಿ ವಾದಿಯು ಪ್ರತಿವಾದಿಯಿಂದ **1** ಲಕ್ಷ **75** ಸಾವಿರ ರೂಪಾಯಿ ಹಣವನ್ನು ಸ್ವೀಕರಿಸಿರುತ್ತಾರೆ ಎಂದು ನಮೂದಿಸಿರುವುದು ಮತ್ತು ಸದರಿ ದಾಖಲಾತಿಗೆ ಪ್ರತಿವಾದಿ ಮತ್ತು ಸಾಕ್ಷಿದಾರರ ಸಹಿಗಳು ಇರುವುದು ಕಂಡು ಬರುತ್ತದೆ. ಇದಕ್ಕೆ ಪ್ರತಿಯಾಗಿ ಪ್ರತಿವಾದಿಯು ನಿ.ಪಿ.**1** ರ ದಾಖಲಾತಿಯನ್ನು ಖಂಡಿಸುವಂತಹ ಯಾವುದೇ ದಾಖಲಾತಿ ಸಾಕ್ಷ್ಯವನ್ನು ಹಾಜರುಪಡಿಸಿ ನಿಶಾನೆ ಪಿ.**1** ರ ದಾಖಲಾತಿಯನ್ನು ಖಂಡಿಸಿರುವುದಿಲ್ಲ. ಹಾಗಾಗಿ ಪ್ರತಿವಾದಿಯು ವಾದಿಯಿಂದ ರೂ.**1,75,000/-** ಹಣವನ್ನು ಸಾಲವಾಗಿ ಪಡೆದು ನಿ.ಪಿ.**1** ರ ದಾಖಲಾತಿಯನ್ನು ಸಾಕ್ಷಿದಾರರ

ಸಮಕ್ಷಮದಲ್ಲಿ ವಾದಿಯ ಪರವಾಗಿ ಜಾರಿ ಮಾಡಿಕೊಟ್ಟಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅದೇ ರೀತಿಯಾಗಿ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ತೆಗೆದುಕೊಂಡಿರುವ ಪ್ರತಿರಕ್ಷಣೆಗಳನ್ನು ಸೂಕ್ತವಾದ ಮತ್ತು ನ್ಯಾಯಾಲಯವು ನಂಬಬಹುದಾದ ಸಾಕ್ಷಾಧಾರಗಳ ಮೂಲಕ ರುಜುವಾತುಪಡಿಸಲು ಪ್ರತಿವಾದಿಯು ವಿಫಲರಾಗಿರುವುದು ಕಂಡುಬರುತ್ತದೆ.

**29.** ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮದ ಅಡಿ ಲಿಖಿತ ವರ್ಗಾವಣೀಯ ದಾಖಲಾತಿಗಳಿಗೆ ಸಂಬಂಧಿಸಿದಂತೆ ಖಂಡಿಸಬಹುದಾದ ಸಾಕ್ಷ್ಯಗಳನ್ನು ಒದಗಿಸದ ಹೊರತು ಕಾನೂನಿನ ಅಡಿಯಲ್ಲಿ ಲಿಖಿತ ವರ್ಗಾಣೆಯಲ್ಲಿ ನಮೂದಿಸಿರುವ ಪ್ರತಿಫಲ, ದಿನಾಂಕ, ಸಮಯ ಮತ್ತು ಮುಂತಾದವುಗಳ ಬಗ್ಗೆ ಧಾರಕನ ಪರವಾಗಿ ಪೂರ್ವಭಾನೆಯನ್ನು ಹೊಂದಬಹುದಾಗಿರುತ್ತದ. ಸದರಿ ಪೂರ್ವಭಾವನೆಯನ್ನು ಖಂಡಿಸುವಂತಹ ಸಾಕ್ಷ್ಯವನ್ನು ಪ್ರತಿವಾದಿಯು ಹಾಜರುಪಡಿಸಿದರಷ್ಟೇ ಅದನ್ನು ಸಾಭೀತುಪಡಿಸುವ ಹೊಣೆಗಾರಿಕೆ ವಾದಿಯ ಮೇಲೆ ವರ್ಗಾವಣೆಗೊಳ್ಳುತ್ತದೆ. ಈ ಹಂತದಲ್ಲಿ ಲಿಖಿತ ವರ್ಗಾವಣೆ ಅಧಿನಿಯಮ ಕಲಂ.118 ರಡಿಯಲ್ಲಿ ಈ ಕೆಳಕಂಡಂತೆ ಉಲ್ಲೇಖವಿರುತ್ತದೆ.

> **118. Presumptions as to negotiable instruments.-** Until the contrary is proved, the following presumptions shall be made:
>
> (a) **of consideration.-**that every negotiable instrument was made or drawn for consideration, and that every such instrument when it has been accepted,endorsed, negotiated or transferred for consideration;
>
> b. **as to date.-**that every negotiable instrument bearing a date was made or drawn on such date;
>
> c. **as to time of acceptance.-**that every accepted bill of exchange was accepted within a reasonable time after its date and before its maturity;

d. **as to time transfer.-**that every transfer of a negotiable instrument was made before its maturity;

e. **as to order of endorsement.-**that the endorsements appearing upon a negotiable instrument were made in the order in which they appear thereon;

f. **as to stamp.-**that a lost promissory note, bill of exchange or cheque was duly stamped;

g. **that holder is a holder in due course.-**that the holder of a negotiable instrument is a holder in due course:

Provided that, where the instrument has been contained from its lawful owner, or from any person in lawful custody thereof, by means of an offence of fraud, or has been obtained from the maker or acceptor thereof by means of an offence or fraud or for unalwful consideration,the burden of proving that the holder is a holder in due course lies upon him. SCC

**30.** ಈ ಮೇಲ್ಕಂಡ ಕಾನೂನಿನ ಪರಿಕಲ್ಪನೆಯನ್ನು ಪರಿಶೀಲಿಸಿದಾಗ, ವರ್ಗಾವಣೆಯ ಲಿಖಿತ ಪತ್ರಗಳ ಅಧಿನಿಯ ಕಲಂ **118** ರ ಪ್ರಾಮಿಸರಿ ನೋಟನ್ನು ಸಲ್ಲಿಸಿರುವ ಧಾರಕನ ಬಗ್ಗೆ ಇರುವ ಪೂರ್ವ ಭಾವನೆಗಳ ಬಗ್ಗೆ ಉಲ್ಲೇಖಿಸಿರುತ್ತಾರೆ. ವರ್ಗಾವಣೇಯ ಲಿಖಿತಪತ್ರಗಳ ಅಧಿನಿಯಮ ಕಲಂ **118** ರಂತೆ ಯಾವುದೇ ಒಂದು ಲಿಖಿತ ವರ್ಗಾವಣೆಯ ದಾಖಲೆಯಲ್ಲಿ ನಮೂದಿಸಿದ ಹಣದ ಮೊತ್ತ, ದಿನಾಂಕ, ಸ್ವೀಕರಿಸುವಿಕೆ ಇತ್ಯಾದಿಗಳ ಬಗ್ಗೆ ಧಾರಕ/ವಾದಿಯ ಪರವಾಗಿ ಪೂರ್ವ ಭಾವನೆ ಹೊಂದಬಹುದು ಎಂದು ತಿಳಿಸಲಾಗಿರುತ್ತದೆ. ಈ ಅಂಶಗಳ ಬಗ್ಗೆ ವಾದಿಯ ಪರವಾಗಿರುವ ಪೂರ್ವ ಭಾವನೆ ತೊಡೆದು ಹಾಕಲು ಪ್ರತಿವಾದಿಯು ಖಂಡಿಸಬಹುದಾದ ಅಂಶಗಳನ್ನು ಸಾಭೀತುಪಡಿಸಿದರೆ ಮಾತ್ರ ವಾದಿಯ ಮೇಲೆ ರುಜುವಾತಿನ ಭಾರ ಮರು ವರ್ಗಾವಣೆಯಾಗುತ್ತದೆ ಮತ್ತು ಆಗ ವಾದಿಯು

ರುಜುವಾತುಪಡಿಸಲು ವಿಫಲನಾದರೆ ಮಾತ್ರ ತನ್ನ ಪರಿಹಾರವನ್ನು ಪಡೆಯಲು ವಿಫಲನಾಗುತ್ತಾನೆ. ಹಾಗಾಗಿ ಪ್ರತಿವಾದಿಯು **ನಿ.ಪಿ.1** ರಂತೆ ಪ್ರಾಮಿಸರಿ ನೋಟನ್ನು ಬರೆದು ಕೊಟ್ಟಿರುವುದಿಲ್ಲ ಎಂಬ ಅಂಶವನ್ನು ಪರಿಗಣಿಸಲು ಬರುವುದಿಲ್ಲ.

**31.** ಇದಕ್ಕೆ ಪೂರಕವಾಗಿ ಈ ನ್ಯಾಯಾಲಯವು ಮಾನ್ಯ ಸರ್ವೋಚ್ಚ ನ್ಯಾಯಾಲಯವು **(2008) 7 SCC 655** ರಲ್ಲಿ ನೀಡಿರುವ ತೀರ್ಪುಜನ್ಯವನ್ನು ಉಲ್ಲೇಖಿಸುತ್ತದೆ. ಸದರಿ ತೀರ್ಪುಜನ್ಯದಲ್ಲಿ ಈ ಕೆಳಕಂಡಂತೆ ಇರುತ್ತದೆ.

> N.I.Act 1881 – S.118 (a) – Presumption of consideration – held, initial burden is on defendant to show that existence of consideration was improbable or doubtful or illegal. - If this burden is discharged, onus shifts on plaintiff – if, however, defendant fails to discharge initial burden, the plaintiff is invariably entitled to benefit of the presumption – mere denial of consideration is not sufficient to discharge the initial burden – something probable has to be brought on record to prove non-existence of consideration on facts, execution of pronote proved – respondents failed to discharge initial burden either by direct evidence or preponderance of probabilities – held, appellate entitled to benefit of presumption under Section 118(a).

**32.** ಮೇಲಿನ ತೀರ್ಪುಜನ್ಯವನ್ನು ಪರಿಶೀಲಿಸಿದಾಗ ಪ್ರತಿವಾದಿಯು ಪ್ರಾರಂಭಿಕವಾಗಿ ತನ್ನ ಮೇಲಿರುವ ರುಜುವಾತಿನ ಭಾರವನ್ನು ಸಾಭೀತುಪಡಿಸದ ಹೊರತು ವಾದಿಯು ಪೂರ್ವಭಾವನೆಯ ಲಾಭ ಹೊಂದಲು ಅರ್ಹನು ಎಂಬುದಾಗಿರುತ್ತದೆ. ಈ ದಾವೆಯಲ್ಲಿಯೂ ಸಹ ಪ್ರತಿವಾದಿಯು ತಾನು ತೆಗೆದುಕೊಂಡಿರುವ ಪ್ರತಿರಕ್ಷಣೆಗಳನ್ನು ಸಾಭೀತುಪಡಿಸುವಲ್ಲಿ ವಿಫಲವಾಗಿರುತ್ತಾನೆ.

ಹಾಗಾಗಿ ಈ ಮೇಲಿನ ತೀರ್ಪುಜನ್ಯವು ಈ ದಾವೆಯ ವಸ್ತುಸ್ಥಿತಿಗೆ ಅನ್ವಯಿಸುತ್ತದೆ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

**33.** ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯು ಸಲ್ಲಿಸಿರುವ ದಾವೆಯು ಕಾಲ ಪರಿಮಿತಿ ಅಧಿನಿಯಮದ ಅಡಿಯಲ್ಲಿ ಊರ್ಜಿತವಾಗುವುದಿಲ್ಲ ಎಂದು ಪ್ರತಿರಕ್ಷಣೆಗಳನ್ನು ತೆಗೆದುಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ ಮಾನ್ಯ ವಾದಿ ಪರ ವಕೀಲರು ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ತೆಗೆದುಕೊಂಡಿರುವ ಪ್ರತಿರಕ್ಷಣೆಗಳನ್ನು ನಿರ್ಧಿಷ್ಟವಾಗಿ ಅಲ್ಲಗಳೆದು, ವಾದಿ ಸಲ್ಲಿಸಿರುವ ದಾವೆಯು ಕಾಲ ಪರಿಮಿತಿಯಲ್ಲಿ ಇರುತ್ತದೆ ಎಂದು ಹೇಳಿರುತ್ತಾರೆ.

**34.** ಈ ಕುರಿತು ವಾದ ಪತ್ರವನ್ನು ಪರಿಶೀಲಿಸಲಾಗಿ ವಾದಿಯು ಪ್ರತಿವಾದಿಯ ವಿರುದ್ಧ ದಿನಾಂಕ:**05.02.2019** ರ ಪ್ರಾಮಿಸರಿ ನೋಟೀನ ಆಧಾರದ ಮೇಲೆ ಹಣದ ವಸೂಲಾತಿ ಪರಿಹಾರವನ್ನು ಕೋರಿ ಈ ದಾವೆಯನ್ನು ದಿನಾಂಕ:**05.02.2022** ರಂದು ಸಲ್ಲಿಸಿರುತ್ತಾರೆ. ದಿನಾಂಕ 05.02.2019 ರಂದು ಪ್ರತಿವಾದಿಯು ವಾದಿಯಿಂದ ರೂ.1 ಲಕ್ಷ 75 ಸಾವಿರ ಹಣವನ್ನು ಸಾಲವಾಗಿ ಪಡೆದು ಪ್ರತಿವಾದಿಯು ವಾದಿಯ ಪರವಾಗಿ ಪ್ರಾಮಿಸರಿ ನೋಟನ್ನು ಜಾರಿ ಮಾಡಿಕೊಟ್ಟಾಗ, ವಾದಿಯು ಪ್ರತಿವಾದಿಯನ್ನು ಹಲವಾರು ಬಾರಿ ಸಾಲದ ಹಣವನ್ನು ಮರು ಪಾವತಿಸುವಂತೆ ಕೇಳಿದಾಗ ಮತ್ತು ದಿನಾಂಕ:28.01.2022 ರಂದು ವಾದಿಯು ತಮ್ಮ ವಕೀಲರ ಮೂಲಕ ಪ್ರತಿವಾದಿಗೆ ಲೀಗಲ್ ನೋಟೀಸನ್ನು ಕಳುಹಿಸಿದಾಗ ಈ ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಉಂಟಾಗಿರುತ್ತದೆ ಎಂದು ನಿರ್ಧಿಷ್ಟವಾಗಿ ವಾದಪತ್ರದಲ್ಲಿ ಹೇಳಿರುತ್ತಾರೆ. ವಾದಿಯ ವಾದಪತ್ರವನ್ನು ಮತ್ತು ನಿಶಾನೆ ಪಿ**1** ರ ದಾಖಲಾತಿಯನ್ನು ಪರಿಶೀಲಿಸಿದಾಗ ವಾದಿಯು ಈ ದಾವೆಯನ್ನು ನಿಶಾನೆ ಪಿ.**1** ದಾಖಲಾತಿಯು ಜಾರಿಯಾದ ದಿನದಿಂದ ಮೂರು ವರ್ಷದ ಒಳಗೆ ದಾವೆಯನ್ನು ಸಲ್ಲಿಸಿರುವುದು ಕಂಡು ಬರುತ್ತದೆ. ಹಾಗಾಗಿ ವಾದಿ ಸಲ್ಲಿಸಿರುವ ದಾವೆಯು ಕಾಲ ಪರಿಮಿತಿಯಲ್ಲಿ ಇರುತ್ತದೆ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗಾಗಿ ಪ್ರತಿವಾದಿಯು ತಮ್ಮ

ಪ್ರತಿವಾದ ಪತ್ರದಲ್ಲಿ ತೆಗೆದುಕೊಂಡಿರುವ ಪ್ರತಿರಕ್ಷಣೆಯು ಊರ್ಜಿತವಾಗುವುದಿಲ್ಲ ಎಂದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ.

**35.** ಈ ಮೇಲಿನ ವಾದಿ ಮತ್ತು ಪ್ರತಿವಾದಿಯ ವಾದ ಪತ್ರ, ಪ್ರತಿವಾದ ಪತ್ರ ಹಾಗೂ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಪ್ರತಿವಾದಿಯು ವಾದಿಯಿಂದ ದಿನಾಂಕ **05.02.2019** ರಂದು ರೂ.**1,75,000/-** ಹಣವನ್ನು ಸಾಲವಾಗಿ ಪಡೆದಿರುವುದು ಹಾಗೂ ಸದರಿ ಹಣವನ್ನು ಬಡ್ಡಿಯೊಂದಿಗೆ ಪಾವತಿಸಲು ಪ್ರತಿವಾದಿಯು ಭಾಧ್ಯಸ್ಥರಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ವಾದಿಯು ಪ್ರತಿವಾದಿಗೆ ಸಾಲದ ಹಣವನ್ನು ಮರು ಪಾವತಿಸಲು ಸಾಕಷ್ಟು ಕಾಲಾವಕಾಶ ನೀಡಿದ್ದಾಗ್ಯೂ ಕೂಡ ಪ್ರತಿವಾದಿಯು ಸಾಲದ ಹಣವನ್ನು ಮರುಪಾವತಿ ಮಾಡದಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ವಾದಿಯು ಈ ದಾವೆಯಲ್ಲಿ ಕೋರಿರುವಂತೆ ಪ್ರತಿವಾದಿಯಿಂದ ರೂ.**3,06,000/-** ಮೊತ್ತವನ್ನು ಪಡೆಯಲು ಅರ್ಹರಿರುತ್ತಾರೆ. ವಾದಿ ಮತ್ತು ಪ್ರತಿವಾದಿಯ ಮಧ್ಯ ಕೈ ಸಾಲದ ವ್ಯವಹಾರವಾಗಿರುತ್ತದೆ. ಅಲ್ಲದೆ ವಾದಿಯು ತನ್ನ ವಾದ ಪತ್ರದಲ್ಲಿ ಹಣವನ್ನು ಗೃಹಕೃತ್ಯ ಉದ್ದೇಶಕ್ಕಾಗಿ ಪ್ರತಿವಾದಿಗೆ ಕೊಟ್ಟಿರುತ್ತೇನೆ ಎಂಬುದರ ಬಗ್ಗೆ ನಮೂದಿಸಿರುತ್ತಾರೆ. ಹಾಗಾಗಿ ವಾದಿಯು ದಾವೆಯಲ್ಲಿ ಕೋರಿರುವಂತೆ ರೂ.**3,06,000/-** ಮೊತ್ತವನ್ನು ಪಡೆಯಲು ಅರ್ಹರಿರುತ್ತಾರೆ. ಈ ದಾವೆಯನ್ನು ಸಲ್ಲಿಸಿದ ದಿನಾಂಕದಿಂದ ಹಣವನ್ನು ಪಾವತಿಸುವ ದಿನಾಂಕದವರೆಗೂ ವಾದಿಯು ಪ್ರತಿವಾದಿಯಿಂದ ರೂ.**1,75,000/-** ಮೊತ್ತಕ್ಕೆ ವಾರ್ಷಿಕ ಶೇ.**9** ರ ಬಡ್ಡಿ ದರದಲ್ಲಿ ಬಡ್ಡಿಯನ್ನು ಪಡೆಯಲು ಹಾಗೂ ವಾದಿಯು ದಾವೆಯ ಕುರಿತಾದ ಖರ್ಚನ್ನು ಪಡೆಯಲು ಅರ್ಹರಿರುತ್ತಾರೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ವಿಶ್ಲೇಷಣೆಯಿಂದಾಗಿ ವಿವಾದಾಂಶ ಸಂಖ್ಯೆ-**1** ಮತ್ತು **2** ನ್ನು ಸಕಾರಾತ್ಮಕ ಮತ್ತು ವಿವಾದಾಂಶ ಸಂಖ್ಯೆ**3** ಮತ್ತು **4** ನ್ನು ಭಾಗಶಃ ಸಕಾರಾತ್ಮಕ ಎಂದು ನಿರ್ಣಯಿಸಲಾಗಿದೆ.

**36.** ವಿವಾದಾಂಶ ಸಂಖ್ಯೆ-5:- ಈ ಮೇಲ್ಕಂಡ ಎಲ್ಲಾ ವಿವಾದಾಂಶಗಳನ್ನು ನಿರ್ಣಯಿಸಲಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಈ ಕೆಳಗಿನಂತೆ ಭಾಗಶಃ ಡಿಕ್ರಿ ಮಾಡಲಾಗಿರುತ್ತದೆ

ವಾದಿಯು ಪ್ರತಿವಾದಿಯಿಂದ ರೂ.**3,06,000/-** ಮೊತ್ತವನ್ನು ಪಡೆಯಲು ಅರ್ಹರಿರುತ್ತಾರೆ.

ವಾದಿಯು ಪ್ರತಿವಾದಿಯಿಂದ ರೂ.**1,75,000/-** ಮೊತ್ತಕ್ಕೆ ದಾವೆಯನ್ನು ಸಲ್ಲಿಸಿದ ದಿನಾಂಕದಿಂದ ಹಣವನ್ನು ಪಾವತಿಸುವ ದಿನಾಂಕದವರೆಗೂ ವಾರ್ಷಿಕ ಶೇ.**9** ರ ಬಡ್ಡಿ ದರದಲ್ಲಿ ಬಡ್ಡಿಯನ್ನು ಪಡೆಯಲು ಅರ್ಹರಿರುತ್ತಾರೆ.

ಪ್ರತಿವಾದಿಯು ಸದರಿ ಹಣವನ್ನು ಈ ಆದೇಶವಾದ ದಿನದಿಂದ **3** ತಿಂಗಳ ಒಳಗಾಗಿ ವಾದಿಗೆ ಪಾವತಿಸಲು ಈ ಮೂಲಕ ನಿರ್ದೇಶಿಸಲಾಗಿರುತ್ತದೆ.

ಈ ಪ್ರಕಾರ ಡಿಕ್ರಿ ಬರೆಯುವಂತೆ ಆದೇಶಿಸಲಾಗಿದೆ

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕಃ 29 ನೇ ಏಪ್ರಿಲ್ 2025 ರಂದು ನಾನು ಉದ್ಘೋಷಿಸಿದ್ದೇನೆ.)

IRAPPA DHAVALESHWAR
Digitally signed by IRAPPA DHAVALESHWAR
Date: 2025.05.02 10:59:31 +0530

(ಈರಪ್ಪ ಧವಳೇಶ್ವರ್)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಬಳ್ಳಾರಿ .

## ಅನುಬಂಧ

ವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-

ಪಿ.ಡಬ್ಲ್ಯೂ.1 : ಶ್ರೀ ವಿ.ರಾಮಾಂಜಿನೇಯುಲು
ಪಿ.ಡಬ್ಲ್ಯೂ. 2 : ಜಿ.ವಿ.ನಾಗರಾಜ

ವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-

ನಿ.ಪಿ.1 : ಒಂದು ಪ್ರಾಮಿಸರಿ ನೋಟ್
ನಿ.ಪಿ.1 ಎ ಮತ್ತು ಬಿ : ಸಾಕ್ಷಿದಾರರ ಸಹಿ
ನಿ.ಪಿ.1 ಸಿ : ಪ್ರತಿವಾದಿಯ ಸಹಿ
ನಿ.ಪಿ.2 : ನೊಟೀಸ್
ನಿಪಿ-3 : ಅಂಚೆ ರಸೀದಿ

ಪ್ರತಿವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-

ಡಿ.ಡಬ್ಲ್ಯೂ.1 : ಎಸ್ ಲಕ್ಷ್ಮೀನಾರಾಯಣ
ಡಿ.ಡಬ್ಲ್ಯೂ.2 : ಯು.ಮಲ್ಲಿಕಾರ್ಜುನ

ಪ್ರತಿವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:- - ಇಲ್ಲ -

IRAPPA DHAVALESHWAR

Digitally signed by IRAPPA DHAVALESHWAR
Date: 2025.05.02 10:59:21 +0530

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಬಳ್ಳಾರಿ.